ದಿನಾಂಕಃ **- -20-09-2019**

ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ**

ನಾನು 9 ನೇ ತರಗತಿತನಕ ಓದಿದ್ದೇನೆ. ನೀವು ಟೈಲರಿಂಗ್ ಕೆಲಸ ಮಾಡುತ್ತೀರಿ ಎಂದರೆ ಹಿಂದೆ ಗಾರ್ಮೆಂಟ್ಸ್‌ಗೆ ಹೋಗುತ್ತಿದ್ದೆ, ಈಗ ವ್ಯವಸಾಯ ಮಾಡತ್ತೇನೆ ಎನ್ನುತ್ತಾರೆ. ವಾದಿ ನಿಮಗೆ 10 ವರ್ಷದಿಂದ ಪರಿಚಯ ಎಂದರೆ 6 ವರ್ಷದಿಂದ ಪರಿಚಯ ಎನ್ನುತ್ತಾರೆ. ನೀವು ಬೆಂಗಳೂರಿನಲ್ಲಿ ವಾದಿಯವರ ಮನೆಯಲ್ಲಿ ವಾಸವಿದ್ದೀರಿ ಎಂದರೆ ಸರಿ. ವಾದಿಯವರ ಎಲ್ಲಾ ವಿಚಾರಗಳು ನನಗೆ ಗೊತ್ತಿಲ್ಲ. ನಿಮ್ಮ ಬಾಡಿಗೆ ಮನೆಯಲ್ಲಿ ಟೈಲರಿಂಗ್ ಮಿಷನ್ ಇಟ್ಟಿದ್ದು ಟೈಲರಿಂಗ್ ಕೆಲಸ ಮಾಡುತ್ತಿದ್ದೀರಿ ಎಂದರೆ ಸರಿಯಲ್ಲ. ಪ್ರತಿವಾದಿ 1 ಮತ್ತು 2 ನಿಮಗೆ ದೂರದ ಸಂಬಂಧಿ ಎಂದರೆ ಸರಿ.

ನೀವು ವಾದಿ ಮನೆಯಲ್ಲಿ ಬಾಡಿಗೆಗೆ ಇದ್ದಾಗ ಚೀಟಿ ವ್ಯವಹಾರ ಸಹ ಮಾಡುತ್ತಿದ್ದೀರಿ ಎಂದರೆ ಸರಿಯಲ್ಲ.ವಾದಿ ಮತ್ತು ಪ್ರತಿವಾದಿ 2 ನಿಮ್ಮ ಬಳಿ ಚೀಟಿ ಹಾಕಿದ್ದರು ಎಂದರೆ ಸರಿಯಲ್ಲ. ನೀವೇ ಪ್ರತಿವಾದಿ 2ರವರನ್ನು ವಾದಿಗೆ ಪರಿಚಯಿಸಿದ್ದೀರಿ ಎಂದರೆ ಚರಣ್ ಕುಮಾರ್ ಅವರ ಸಹೋದರ ಗಿರೀಶ್ ನಮ್ಮ ಮನೆಯಲ್ಲಿ ಇದ್ದರು ಎನ್ನುತ್ತಾರೆ. ಗಿರೀಶ್ ಡಿಪ್ಲೋಮಾ ಮಾಡಲು ನಮ್ಮ ಮನೆಯಲ್ಲಿದ್ದರು, ಈಗ ಏನು ಕೆಲಸ ಮಾಡುತ್ತಾರೆ ಎಂದು ನನಗೆ ಗೊತ್ತಿಲ್ಲ, ವಾದಿ ಮನೆಗಳಿಗೆ ವೈರಿಂಗ್ ಮಾಡುತ್ತಾರೆ. ವೈರಿಂಗ್ ಮಾಡಲು ಪರವಾನಿಗೆ ಇದಿಯೋ ಇಲ್ಲವೊ ನನಗೆ ಗೊತ್ತಿಲ್ಲ. ಚರಣ್ ಕುಮಾರ್ ಮತ್ತು ಗಿರೀಶ್ ನಮ್ಮ ಮನೆಯಲ್ಲಿದ್ದರು ಎಂಬ ಬಗ್ಗೆ ಯಾವುದೇ ದಾಖಲಾತಿ ಇಲ್ಲ. ಚರಣ್ ಕುಮಾರ್ ಮತ್ತು ಗಿರೀಶ್ ನಿಮ್ಮ ಮನೆಯಲ್ಲಿ ಯಾವತ್ತು ಇರಲಿಲ್ಲ ಎಂದರೆ ಸರಿಯಲ್ಲ.

ನಿಮ್ಮ ಮತ್ತು ವಾದಿ ನಡುವೆ ಚೆನ್ನಾಗಿ ವಿಶ್ವಾಸ ಇತ್ತು ಎಂದರೆ ಸರಿಯಲ್ಲ. ವಾದಿ ಬಡ್ಡಿ ವ್ಯವಹಾರ ಮಾಡುತ್ತಾರೆ ಎಂದರೆ ನನಗೆ ಗೊತ್ತಿಲ್ಲ.ನಿಮ್ಮ ತಂದೆ ಚರಣ್ ಕುಮಾರ್ ವಿರುದ್ಧ ಚೆಕ್ ಪ್ರಕರಣ ದಾಖಲಿಸಿದ್ದರು ಎಂದರೆ ಸರಿ. ಸದರಿ ಚೆಕ್ ಪ್ರಕರಣವನ್ನು ಚೀಟಿಗಾಗಿ ಭದ್ರತೆಗಾಗಿ ನೀಡಿದ್ದ ಚೆಕ್‌ನ ಆದಾರದ ಮೇಲೆ ದಾಖಲಿಸಿದ್ದರು ಎಂದರೆ ಸರಿಯಲ್ಲ. ನಾನು ಪ್ರತಿವಾದಿಯರ ಊರು ನೋಡಿದ್ದೇನೆ ಆದರೆ ಅವರ ಆಸ್ತಿ ಗೊತ್ತಿಲ್ಲ. ಪ್ರತಿವಾದಿ 2 ಬೆಂಗಳೂರಿನಲ್ಲಿ ಇಂಜಿನಿಯರ್ ಆಗಿದ್ದಾರೆ ಅವರಿಗೆ ಮಾಸಿಕ 50-60 ಸಾವಿರ ಸಂಬಳ ಬರುತ್ತದೆ ಎಂದರೆ ಸರಿ.ಪ್ರತಿವಾದಿಯರು ಸುಮಾರು 10-15 ಲಕ್ಷ ಖರ್ಚು ಮಾಡಿ ಮನೆ ಕಟ್ಟಿಸಿದ್ದಾರೆ ಎಂದರೆಸರಿ. ಪ್ರತಿವಾದಿಯರಿಗೆ ಜಮೀನುಗಳು ಹಾಗೂ ಬೊರ್‌ವೆಲ್ ಇದಿಯೋ ಇಲ್ಲವೋ ಗೊತ್ತಿಲ್ಲ.

ವಡ್ಡನ ಹಳ್ಳಿ ಬುಕ್ಕಾಪಟ್ಟಣ ಹೋಬಳಿ ಎಂದರೆ ಸರಿ.ನನ್ನ ಪ್ರಮಾಣ ಪತ್ರದಲ್ಲಿ ಬುಕ್ಕಾಪಟ್ಟಣ ಹೋಬಳಿ ಎಂದು ಬರೆಸಿರಬಹುದು. ನನ್ನ ಮುಖ್ಯ ವಿಚಾರಣೆ ಅಂಶಗಳು ನನಗೆ ಗೊತ್ತು, ಅದರಲ್ಲಿ ಈ ದಾವೆಯ ಅಂಶಗಳನ್ನು ಬರೆಯಲಾಗಿದೆ. ಸೋಮಶೇಖರ್ 2014ರಂದು ಜಮೀನು ಖರೀನಿಸಿದ್ದಾರೆ ಎಂದು ಬರೆದಿದ್ದಾರೆ ಎನ್ನುತ್ತಾರೆ. ಪ್ರತಿವಾದಿ 2 ಮತ್ತು ವಾದಿ ಜಮೀನು ವ್ಯವಹಾರವನ್ನು ಮಾತನಾಡಿದ್ದರು. ಆನಂತರ ನನ್ನನ್ನು ಸಹಿ ಮಾಡಿಲು ಕರೆದರು. ನೋಂದಣಿ ಕಚೇರಿ ಬಳಿ ವಾದಿ ಮತ್ತು ಪ್ರತಿವಾದಿ ನನಗೆ ಕ್ರಯದ ವ್ಯವಹಾರವನ್ನು ನನಗೆ ತಿಳಿಸಿದರು, 5 ಲಕ್ಷಕ್ಕೆ ವ್ಯಾಪಾರ ಆಗಿದೆ ಎಂದು ತಿಳಿಸಿದರು. ಆ ದಿನ ನಾನು ಊರಿನಿಂದ ಬಂದೆ. ವಾದಿ ಬೆಂಗಳೂರಿನಿಂದ ಬಂದರು. ನಾನು ನೋಂದಣಿ ಕಚೇರಿಗೆ ಬಂದಾಗ ಮದ್ಯಾಹ್ನ 3.00 ಗಂಟೆ ಆಗಿತ್ತು ಅಷ್ಟರಲ್ಲಿ ವಾದಿ ಮತ್ತು ಪ್ರತಿವಾದಿಯರು ಬಂದಿದ್ದರು. ನನಗೆ ಚರಣ್ ಕುಮಾರ್ ದೂರವಾಣಿಕರೆ ಮಾಡಿ ಬರಲು ತಿಳಿಸಿದ್ದರು. ಚರಣ್ ಕುಮಾರ್‌ರವರ ದೂರವಾಣಿ ನಂಬರ್ ನನಗೆ ಗೊತ್ತಿಲ್ಲ. ಪ್ರತಿವಾದಿ

2 ನಿಮಗೆ ದೂರವಾಣಿ ಕರೆ ಮಾಡಿಲ್ಲ, ಬರಲು ತಿಳಿಸಿಲ್ಲ ಎಂದರೆ ಸರಿಯಲ್ಲ. ಆಸ್ತಿ ಮಾರಾಟ ಮತ್ತು ಕೊಳ್ಳುವ ವ್ಯವಹಾರ ನಿಮಗೆ ಚೆನ್ನಾಗಿ ಗೊತ್ತು ಎಂರದೆ ಸರಿಯಲ್ಲ.

2ನೇ ಪ್ರತಿವಾದಿಗೆ ವಾದಿಯಿಂದ 3 ಲಕ್ಷ ಹಣವನ್ನು ಶೇಃ 2ರಷ್ಟು ಬಡ್ಡಿಯಂತೆ ನೀವೇ ಕೊಡಿಸಿದ್ದೀರಿ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿ ಮನೆ ಕಟ್ಟಿಸುತ್ತಿದ್ದ ಕಾರಣ ಹಣ ಬೇಕೆಂದು ನಿಮಗೆ ತಿಳಿಸಿದ್ದರು ಎಂದರೆ ಸರಿಯಲ್ಲ.ಸದರಿ ಸಾಲದ ವ್ಯವಹಾರವನ್ನು ವಾದಿ ಪುಸ್ತಕದಲ್ಲಿ ಬರೆದುಕೊಂಡು 3 ಲಕ್ಷ ಹಣವನ್ನು ಚರಣ್ ಕುಮಾರ್‌ಗೆ ನೀಡಿದರು ಎಂದರೆ ಸರಿಯಲ್ಲ. ಆಗ ನೀವು ಮತ್ತು ವಾದಿ ಪ್ರತಿವಾದಿಯರಿಗೆ ಭದ್ರತೆ ಪತ್ರ ಬರೆದುಕೊಡಬೇಕೆಂದು ಕೇಳಿದ್ದೀರಿ ಎಂದರೆ ಸರಿಯಲ್ಲ. ನಿಮ್ಮ ಮತ್ತು ವಾದಿ ಪ್ರತಿವಾದಿಯರ ನಡುವೆ ಚೀಟಿ ವ್ಯವಹಾರವಾಗಿ ಒಳ್ಳೆ ಸ್ನೇಹ ಇತ್ತು ಎಂದರೆ ನಾವು ಸ್ನೇಹಿತರು ಆದರೆ ಚೀಟಿ ವ್ಯವಹಾರ ಇರಲ್ಲಿಲ್ಲ ಎನ್ನುತ್ತಾರೆ. ನಿಮ್ಮ ಮೇಲಿನ ನಂಬಿಕೆಯಿಂದ ವಾದಿ ತಯೂರಿಸಿದ್ದ ದಾಖಲಾತಿಗೆ ಓದದೇ ಪ್ರತಿವಾದಿಯರು ಸಹಿ ಮಾಡಿದರು ಎಂದರೆ ಸರಿಯಲ್ಲ, ಓದಿ ಸಹಿ ಮಾಡಿದರು ಎನ್ನುತ್ತಾರೆ. ಪ್ರತಿವಾದಿಯರಿಗೆ ಸಾಕಷ್ಟು ಹಣ ಇರುವ ಕಾರಣ ಜಮೀನನ್ನು ಮಾರಾಟ ಮಾಡುವ ಅವಶ್ಯಕತೆ ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಯರ ಆಸ್ತಿ ಹಾಗೂ ಆದಾಯದ ಬಗ್ಗೆ ಎಲ್ಲಾ ವಿಚಾರಗಳು ತಿಳಿದಿದೆ ಎಂದರೆ ಸರಿಯಲ್ಲ. ನೀವು ಮತ್ತು ವಾದಿ ಆದಾರ ಪತ್ರ ಎಂದು ಹೇಳಿ ನಿಪಿ-1ನ್ನು ಸೃಷ್ಟಿಸಿದ್ದೀರಿ ಎಂದರೆ ಸರಿಯಲ್ಲ.

ವಾದಿ ನೋಟೀಸ್ ನೀಡಿದ ನಂತರ ಪ್ರತಿವಾದಿಯರು ಹಾಗೂ ನೀವು ವಾದಿ ಮನೆಗೆ ಹೋಗಿದ್ದೀರಿ ಎಂದರೆ ಸರಿಯಲ್ಲ. ಆಗ ಪ್ರತಿವಾದಿಯರು ತಾವು ಸಾಲ ಪಡೆದಿದ್ದ ಹಣ ವಾಪಸ್ಸು ಮಾಡುತ್ತೇವೆ ಆಧಾರ ಪತ್ರವನ್ನು ವಾಪಸ್ಸು ಮಾಡುವಂತೆ ಕೇಳಿದ್ದರು ಎಂದರೆ ನನಗೆ ಗೊತ್ತಿಲ್ಲ. ಆಗ ನೀವು ಮತ್ತು ವಾದಿ ಬಡ್ಡಿಯನ್ನು ಲೆಕ್ಕ ಮಾಡಿ

ಹೇಳುತ್ತೇವೆ ಎಂದು ಹೇಳಿದ್ದೀರಿ ಎಂದರೆ ಸರಿಯಲ್ಲ. ಆ ದಿನ ನಿಪಿ-1ರ ಜೆರಾಕ್ಸ್ ಪ್ರತಿಯನ್ನು ವಾದಿ ಚರಣ್‌ಕುಮಾರ್ ನೀಡಿದ್ದರು ಎಂದರೆ ಸರಿಯಲ್ಲ. ನಿಮಗೆ ಈ ಎಲ್ಲಾ ವಿಚಾರಣ ತಿಳಿದಿದ್ದರೂ ಸಹ ಇಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಪ್ರತಿವಾದಿಯರು ಜಮೀನನ್ನು ಲಪಟಾಯಿಸಲು ನೀವು ಮತ್ತು ವಾದಿ ಸೇರಿ ನಿಪಿ-1 ಸೃಷ್ಟಿಸಿದ್ದೀರಿ ಎಂದರೆ ಸರಿಯಲ್ಲ. ವಾದಿಗೆ ಸಹಾಯ ಮಾಡಲು ನೀವು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ನೀವು ಸುಳ್ಳು ದಾಖಲೆಗಳನ್ನು ಸೃಷ್ಟಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರ್‌ಗೊಳಿಸಿ ಪ್ರಿಂಟ್ ತೆಗೆಯಲಾಯಿತು.)**

ಓ. ಹೇ. ಕೇ. ಸರಿ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಶಿರಾ.